# ಶಿಕ್ಷಕ ಬಂಧುಗಳ ಕೈಹಿಡಿದು ಎಂದು ಕೈ ಬಿಡದೆ ನಡೆದುಕೊಂಡು ಬಂದಿರುವವರು : ಹೊರಟ್ಟಿ



**ಗದಗ ಸಂಜೆ ವಾರ್ತೆ :**

ಗದಗ : ಕಳೆದ ನಾಲ್ಕು ದಶಕಗಳಿಂದ ಶಿಕ್ಷಕರ ಬದುಕಣ್ಣ ಭದ್ರ ಗೊಳಿಸುವುದಕ್ಕಾಗಿ ಅವರ ಪ್ರತಿಯೊಂದು ಸಂಕಷ್ಟ ಕಾಲದಲ್ಲಿ ಕೈ ಹಿಡಿದು ಅವರನ್ನು ಎಂದು ಕೈ ಬಿಡದೆ ನಡೆದುಕೊಂಡು ಬಂದವರು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಎಂದು ಸಭಾಪತಿ ಅವರ ಕಚೇರಿಯ ಬೆಂಗಳೂರಿನ ಸಿಬ್ಬಂದಿ ವರ್ಗ ತಮ್ಮ ಮನದಾಳದ ಮಾತುಗಳನ್ನು ಆಡಿದರು. ಹೊಸ ವರ್ಷದ ನಿಮಿತ್ಯ ಬೆಂಗಳೂರಿನ ಸಭಾಪತಿಯವರ ಕಚೇರಿಯ ಸಿಬ್ಬಂದಿ ವರ್ಗ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಹೂಗುಚ್ಚ ಹಾಗೂ ಸಿಹಿ ನೀಡಿ ಹೊಸ ವರ್ಷದ ಶುಭಾಶಯಗಳನ್ನು ಹೇಳಿ ಆಶೀರ್ವಾದ ಪಡೆದರು. ಕಳೆದ 40 ವರ್ಷದಿಂದ ಶಿಕ್ಷಕರ ಬದುಕನ್ನು ಹಸನ ಗೊಳಿಸುವುದಕ್ಕಾಗಿ ತಮ್ಮ ಖಾಸಗಿ ಬದುಕನ್ನೇ ತ್ಯಾಗ ಮಾಡಿದ್ದಾರೆ. ಸಮಸ್ಯೆ ಹೇಳಿಕೊಂಡು ಯಾರೇ ಬಂದರು ಅವರ ಸಮಸ್ಯೆಗೆ ಪರಿಹಾರ ಒದಗಿಸಿಕೊಟ್ಟು ಅವರ ಮುಖದಲ್ಲಿ ನಗು ಮೂಡಿಸಿದ ಕೀರ್ತಿ ಹೊರಟ್ಟಿ ಅವರಿಗೆ ಸಲ್ಲುತ್ತದೆ. ಮೂರನೇ ಬಾರಿ ಸಭಾಪತಿಗಳಾಗಿ ಅತ್ಯುತ್ತಮ ಕಾರ್ಯಗಳನ್ನು ಮಾಡುವ ಮೂಲಕ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ನಮ್ಮನ್ನು ಸಾಕಷ್ಟು ಗೌರವಿಸುವುದರ ಜೊತೆಗೆ ಸದಾ ಮಾರ್ಗದರ್ಶನ ಮಾಡುವ ಮೂಲಕ ಪ್ರತಿಯೊಬ್ಬ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದು-ಕೊಂಡು ಪ್ರೀತಿಯಿಂದ ಕೆಲಸ ಮಾಡಿಸುತ್ತಾರೆ ಸಿಬ್ಬಂದಿಯಿಂದ ಕೆಲಸ ತೆಗೆಯುವ ಕಲೆ ಸಭಾಪತಿಯವರಿಗೆ ಕರತಲಾ ಮಲಕವಾಗಿದೆ. ಯಾವಂದು ವಿಷಯಗಳನ್ನಾಗಲಿ ಹಾಗೂ ಕಾರ್ಯಕ್ರಮಗಳಾಗಲಿ ಸಹಜವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ತೆಗೆದು-ಕೊಂಡು ಚಿಂತಿಸಿ ಯೋಚಿಸಿ ಹತ್ತಾರು ಸಭೆ ಮಾಡಿ ಒಂದು ಅರ್ಥಪೂರ್ಣ ಕಾರ್ಯಕ್ರಮ ಮೂಡಿಬರುವಂತೆ ನೋಡಿಕೊಳ್ಳುತ್ತಾರೆ. ಇಂತಹ ಹಿರಿಯರ ಹಾಗೂ ಅಪಾರ ಅನುಭವಿಗಳ ಕೈಕೆಳಗೆ ಕೆಲಸ ಮಾಡುತ್ತಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದು ಎಲ್ಲ ಸಿಬ್ಬಂದಿ ವರ್ಗ ಖುಷಿಯಿಂದ ಸಭಾಪತಿಯವರಿಗೆ ಸಿಹಿ ತಿನಿಸಿ ಹೊಸ ವರ್ಷದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಭಾಪತಿ ಅವರ ಆಪ್ತ ಕಾರ್ಯದರ್ಶಿ, ಶೈಲಾ. ಕೆ .ಡಿ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾ ಳ್ವೆಕರ್ ಕಚೇರಿಯ ಹಿರಿಯ ಅಧಿಕಾರಿಗಳಾದ ಎಚ್ ಡಿ ಪಾಟೀಲ್ ಮಧು ಸೇರಿದಂತೆ ವಿವಿಧ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

# ಹೊರಟ್ಟಿಯವರಿಗೆ ಹೊಸ ವರ್ಷದ ಶುಭ ಕೋರಿದ ಸಿಬ್ಬಂದಿ



■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಹೊಸ ವರ್ಷದ ನಿಮಿತ್ತ ಸಭಾಪತಿ ಬಸವರಾಜ ಹೊರಟ್ಟಿಯವರ ಕಚೇರಿಯ ಸಿಬ್ಬಂದಿ ವರ್ಗದವರು ಹೊರಟ್ಟಿ ಅವರಿಗೆ ಹೂಗುಚ್ಛ ಹಾಗೂ ಸಿಹಿ ನೀಡಿ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿ, ಆಶೀರ್ವಾದ ಪಡೆದರು.

ಕಳೆದ 40 ವರ್ಷಗಳಿಂದ ಶಿಕ್ಷಕರ ಬದುಕನ್ನು ಹಸನಾಗಿಸುವುದಕ್ಕಾಗಿ ತಮ್ಮ ಖಾಸಗಿ ಬದುಕನ್ನೇ ತ್ಯಾಗ ಮಾಡಿದ್ದಾರೆ. ಸಮಸ್ಯೆ ಹೇಳಿಕೊಂಡು ಯಾರೇ ಬಂದರೂ, ಅವರ ಸಮಸ್ಯೆಗೆ ಪರಿಹಾರ ಒದಗಿಸಿಕೊಟ್ಟು ಅವರ ಮುಖದಲ್ಲಿ ನಗು ಮೂಡಿಸಿದ ಕೀರ್ತಿ ಹೊರಟ್ಟಿ ಅವರಿಗೆ ಸಲ್ಲುತ್ತದೆ. ನಮ್ಮನ್ನು ಸಾಕಷ್ಟು ಗೌರವಿಸುವುದರ ಜೊತೆಗೆ ಸದಾ ಮಾರ್ಗದರ್ಶನ ನೀಡುವ ಮೂಲಕ ಪ್ರತೀ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರೀತಿಯಿಂದ ಕೆಲಸ ಮಾಡಿಸುತ್ತಾರೆ. ಇಂತಹ ಹಿರಿಯರ ಹಾಗೂ ಅಪಾರ ಅನುಭವಿಗಳ ಅಡಿಯಲ್ಲಿ ಕೆಲಸ ಮಾಡುತ್ತಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದು ಸಿಬ್ಬಂದಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಭಾಪತಿ ಅವರ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ, ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳ್ವೆಕರ್, ಕಚೇರಿಯ ಹಿರಿಯ ಅಧಿಕಾರಿಗಳಾದ ಎಚ್.ಡಿ. ಪಾಟೀಲ್, ಮಧು ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಶಿಕ್ಷಕ ಬಂಧುಗಳ ಕೈಹಿಡಿದು ಎಂದು ಕೈ ಬಿಡದೆ ನಡೆದುಕೊಂಡು ಬಂದಿರುವವರು ಸಭಾಪತಿ ಬಸವರಾಜ್ ಹೊರಟ್ಟಿಯವರು



ಕಳೆದ ನಾಲ್ಕು ದಶಕಗಳಿಂದ ಶಿಕ್ಷಕರ ಬದುಕಣ್ಣ ಭದ್ರ ಗೊಳಿಸುವುದಕ್ಕಾಗಿ ಅವರ ಪ್ರತಿಯೊಂದು ಸಂಕಷ್ಟ ಕಾಲದಲ್ಲಿ ಕೈ ಹಿಡಿದು ಅವರನ್ನು ಎಂದು ಕೈ ಬಿಡದೆ ನಡೆದುಕೊಂಡು ಬಂದವರು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಎಂದು ಸಭಾಪತಿ ಅವರ ಕಚೇರಿಯ ಬೆಂಗಳೂರಿನ ಸಿಬ್ಬಂದಿ ವರ್ಗ ತಮ್ಮ ಮನದಾಳದ ಮಾತುಗಳನ್ನು ಆಡಿದರು. ಹೊಸ ವರ್ಷದ ನಿಮಿತ್ಯ ಬೆಂಗಳೂರಿನ ಸಭಾಪತಿಯವರ ಕಚೇರಿಂಯ ಸಿಬ್ಬಂದಿ ವರ್ಗ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಹೂಗುಚ್ಚ ಹಾಗೂ ಸಿಹಿ ನೀಡಿ ಹೊಸ ವರ್ಷದ ಶುಭಾಶಯಗಳನ್ನು ಹೇಳಿ ಆಶೀರ್ವಾದ ಪಡೆದರು. ಕಳೆದ 40 ವರ್ಷದಿಂದ ಶಿಕ್ಷಕರ ಬದುಕನ್ನು ಹಸನ ಗೊಳಿಸುವುದಕ್ಕಾಗಿ ತಮ್ಮ ಖಾಸಗಿ ಬದುಕನ್ನೇ ತ್ಯಾಗ ಮಾಡಿದ್ದಾರೆ. ಸಮಸ್ಯೆ ಹೇಳಿಕೊಂಡು ಯಾರೇ ಬಂದರು ಅವರ ಸಮಸ್ಯೆಗೆ ಪರಿಹಾರ ಒದಗಿಸಿಕೊಟ್ಟು ಅವರ ಮುಖದಲ್ಲಿ ನಗು ಮೂಡಿಸಿದ ಕೀರ್ತಿ ಹೊರಟ್ಟಿ ಅವರಿಗೆ ಸಲ್ಲುತ್ತದೆ. ಮೂರನೇ ಬಾರಿ ಸಭಾಪತಿಗಳಾಗಿ ಅತ್ಯುತ್ತಮ ಕಾರ್ಯಗಳನ್ನು ಮಾಡುವ ಮೂಲಕ ವಿಧಾನ ಪರಿಷತ್ತಿನ ಇತಿಹಾಸದಲ್ಲಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ನಮ್ಮನ್ನು ಸಾಕಷ್ಟು ಗೌರವಿಸುವುದರ ಜೊತೆಗೆ ಸದಾ ಮಾರ್ಗದರ್ಶನ ಮಾಡುವ ಮೂಲಕ ಪ್ರತಿಯೊಬ್ಬ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರೀತಿಯಿಂದ ಕೆಲಸ ಮಾಡಿಸುತ್ತಾರೆ ಸಿಬ್ಬಂದಿಯಿಂದ ಕೆಲಸ ತೆಗೆಯುವ ಕಲೆ ಸಭಾಪತಿಂಯವರಿಗೆ ಕರತಲಾ ಮಲಕವಾಗಿದೆ. ಯಾವುದು ವಿಷಯಗಳನ್ನಾಗಲಿ ಹಾಗೂ ಕಾರ್ಯಕ್ರಮಗಳಾಗಲಿ ಸಹಜವಾಗಿ ತೆಗೆದುಕೊಳ್ಳದೆ ಗಂಭೀರವಾಗಿ ತೆಗೆದುಕೊಂಡು ಚಿಂತಿಸಿ ಯೋಚಿಸಿ ಹತ್ತಾರು ಸಭೆ ಮಾಡಿ ಒಂದು ಅರ್ಥಪೂರ್ಣ ಕಾರ್ಯಕ್ರಮ ಮೂಡಿಬರುವಂತೆ ನೋಡಿಕೊಳ್ಳುತ್ತಾರೆ. ಇಂತಹ ಹಿರಿಯರ ಹಾಗೂ ಅಪಾರ ಅನುಭವಿಗಳ ಕೈಕೆಳಗೆ ಕೆಲಸ ಮಾಡುತ್ತಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದು ಎಲ್ಲ ಸಿಬ್ಬಂದಿ ವರ್ಗ ಖುಷಿಯಿಂದ ಸಭಾಪತಿಯವರಿಗೆ ಸಿಹಿ ತಿನಿಸಿ ಹೊಸ ವರ್ಷದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಭಾಪತಿ ಅವರ ಆಪ್ತ ಕಾರ್ಯದರ್ಶಿ, ಶೈಲಾ. ಕೆ .ಡಿ ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾ ಳ್ವೆಕರ್ ಕಚೇರಿಯ ಹಿರಿಯ ಅಧಿಕಾರಿಗಳಾದ ಎಚ್ ಡಿ ಪಾಟೀಲ್ ಮಧು ಸೇರಿದಂತೆ ವಿವಿಧ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.